**CC 707 /2020**
ಸಿ.ಡಬ್ಲೂ-1 ಪಿ.ಡಬ್ಲ್ಯೂ-1

ದಿನಾಂಕ**.05.10.2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಪಾಟಿ ಸವಾಲು ಆರೋಪಿತರ ಪರ ಶ್ರೀವೈ.ಪಿ. ಎಂ ವಕೀಲರಿಂದಃ-**

ನಾನು ಮೂಲತಃ ಮಳವಳ್ಳಿ ಮತ್ತಿಕೊಪ್ಪ ಗ್ರಾಮದ ವಾಸಿ ಇರುತ್ತೇನೆ. ಹೂವನಾಯ್ಕ ಇವರು 1ನೇ ಆರೊಪಿ ತಂದೆ ಇರುತ್ತಾರೆ. ಆರೋೀಪಿಗಳು ಹೊಸನಗರ ತಾಲೂಲಕು ವರಾಹಿ ಯೋಜನೆಯಡಿಯಲ್ಲಿ ಮುಳುಗಡೆಯಾಗಿ ಬೇರೆ ಊರಿಗೆ ಬಂದವರು ಎಂದರೆ ಸರಿ. ಸದರಿ ಮುಳಗಡೆ ಪರಿಹಾರದಿಂದ ಮಳವಳ್ಳಿಯಲ್ಲಿ ಆಸ್ತಿ ಖರೀದಿ ಮಾಡಿಕೊಂಡಿದ್ದಾರೆ ಎಂದರೆ ಸರಿ. ಆರೋಪಿಗಳ ಮನೆ ನಮ್ಮ ಮನೆಯು ಅಕ್ಕಪಕ್ಕ 50 ಅಡಿ ದೂರದಲ್ಲಿ ಇರುತ್ತದೆ.

ನನ್ನ ಮತ್ತು ಆರೋಪಿ ಮನೆ ನಡುವೆ ಬೇಲಿ ಇರುತ್ತದೆ. ನನ್ನ ಮನೆಯು ನನ್ನ ಹೆಸರಿನಲ್ಲಿ ಇರುತ್ತದೆ. ನನ್ನ ಮನೆ ಪೂರ್ವಕ್ಕೆಃ ಕಿಟ್ಟನಾಯ್ಕರ ಇವರ ಜಮೀನು, ಪಶ್ಚಿಮಕ್ಕೆ ಸರಕಾರಿ ಜಾಗ, ಉತ್ತರಕ್ಕೆಃ ನಮ್ಮದು ಮತ್ತು ಗಿರಿಯಪ್ಪ ಇವರ ತೋಟ, ದಕ್ಷಿಣಕ್ಕೆ ಸರಕಾರಿ ರಸ್ತೆ ಇರುತ್ತದೆ. ನಾನು ಈಗ್ಗೆ ಸುಮಾರು 45 ವರುಷದ ಹಿಂದೆ ವಾಸದ ಮನೆ ಕಟ್ಟಿರುತ್ತೇನೆ. ನನ್ನ ಹೆಂಡತಿ ಮಕ್ಕಳು ಅಲ್ಲೇ ವಾಸ ಇದ್ದಾರೆ ಎಂದರೆ ಸರಿ.

ಗಲಾಟೆ ನಡೆಯಿತು ಎಂದು ಹೇಳಲಾದ ಸ್ಥಳದ ಸ.ನಂ 83/4 ಎಂದರೆ ಸರಿ. ಅದು 1ಎ-19 ಗುಂಟೆ ವಿಸ್ತೀರ್ಣ ಇದೆ ಎಂದರೆ ಸರಿ. ಅದರ ಮಾಲೀಕರು ಮಹಬಲನಾಯ್ಕ ಆಗಿದ್ದರು. ಸಾಕ್ಷಿ ಮುಂದುವರೆದು ನನ್ನ ಸೊಸೆ ತೆಗೆದುಕೊಂಡಿದ್ದಾರೆ ಎನ್ನುತ್ತಾರೆ. ಮಹಬಲನಾಯ್ಕರ ಇವರದು ಮೂಲತಃ ಕುಂದಾಪುರ ಎಂದರೆ ಸಾಕ್ಷಿಯು ಆಸ್ಂತ ಇಲ್ಲ ಇದೆ ಎನ್ನುತ್ತಾರೆ. ಮಹಬಲ ಎಂದರೆ 4ನೇ ಆರೋಪಿ ಗಿರಿಜಮ್ಮ ಇವರ ತಮ್ಮ ಎಂದರೆ ಸರಿ. ಗಿರಿಜಮ್ಮ ಇವರೂ ಇಂದಿಗೂ ಸದರಿ ಆಸ್ತಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ.

ಸದರಿ ಸ.ನಂ ನಲ್ಲಿ ಒಂದನೇ ಆರೋಪಿ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ನಾನೇ ಕಟ್ಟಿದ್ದೇನೆ ನಮ್ಮದು ಮನೆ ಎನ್ನುತ್ತಾರೆ. ಸದರಿ ಮನೆಯ ಹೊಸ ಮನೆ ಡಿಮ್ಯಾಂಡ್ ರಿಜಿಸ್ಟರನ್ನು ನಾನು ನೋಡಿಲ್ಲ. ಸದರಿ ಸ.ನಂ ನಲ್ಲಿ ಪಂಜುರ್ಲಿ ದೇವಸ್ತಾನ ಇದೆ ಎಂದರೆ ಸಾಕ್ಷಿಯು ದೇವಸ್ತಾನ ಇರುತ್ತದೆ ದೇವಸ್ಥಾನಕ್ಕೂ ನಮ್ಮ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎನ್ನುತ್ತಾರೆ. ಸ.ನಂ 83/4 ರ ಖಾತ ಪಹಣಿ ನನ್ನ ಸೊಸೆ ಹೆಸರಲ್ಲಿ ಇರುತ್ತದೆ. ಸದರಿ ಸಆಸ್ತಿಗೆ ಸಂಬಂದಪಟ್ಟಂತೆ ಕಲಾವತಿಯವರು ಆರೋಪಿಗಳ ಮೇಲೆ ದಾವೆ ಹಾಕಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನಾವು ಜಮೀನು ಖರೀದಿ ಮಾಡಿದಾಗಿನಿಂದಲೂ ನಮ್ಮ ಮತ್ತು ಆರೋಪಿಗಳ ನಡುವೆ ವೈ ಮನಸ್ಸು ಇಡಿರುತ್ತದೆ. ಆರೋಪಿತರನ್ನು ಕೇಳಿ ಸ್ವಾಧೀನ ತೆಗೆದುಕೊಡಿರಾದ್ದರೆ ಎಂದರೆ ಸಾಕ್ಷಿಯು ಖಾತೆದಾರರನ್ನು ಕೇಳಿ ಪಡೆದುಕೊಂಡಿದ್ದೇವೆ ಎನ್ನುತ್ತಾರೆ. ಕ್ರಯಕ್ಕೆ ತೆಗೆದುಕೊಂಡಾಗಿನಿಂದಲೂ ಸದರಿ ಜಮೀನನ ಸ್ವಾದೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ.

ಗಲಾಟೆಯು ಆದಾಗ ಸಮಯ 5 ರಿಂದ 6 ಗಂಟೆಯಾಗಿತ್ತು. ಗಲಾಟೆಯಾದ ಸ್ಥಳದ ಚಕ್ಕುಬಂಧಿ ಹೇಳಲು ಬರುವುದಿಲ್ಲ ಸದರಿ ಗಲಾಟೇಯೂ 15 ನಿಮಿಷಗಳ ಕಾಲ ನಡೆದಿರುತ್ತದೆ. ಆರೋಪಿಗಳು ಪಿಕಪ್ ವಾಹನದಲ್ಲಿ ಸೌದೆ ತರುವಾಗ ನಾನು ನನ್ನ ಸೊಸೆ ಮತ್ತು ಮಗ ಸೇರಿ ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಿಸಿ ನಂ 706/2020 ರಂತೆ ನನ್ನ ಮೇಲೆ ಪ್ರಕರಣದ ಇದೆ ಎಂದರೆ ಸರಿಯಲ್ಲ. ನಾನು ಗಲಾಟೆಯಾದ ದಿನ ನನಗೆ ಪ್ರಜ್ಞೆ ತಪ್ಪಿರಲಿಲ್ಲ. 1 ನೇ ಅರೋಪಿ ಉಮೇಶ ತಲೆ ಮೇಲೆ ಹೊಡೆದಿರುತ್ತಾರೆ. 3 ನೇ ಆರೋಪಿ ಎಡ ಗೈ ಮೇಲೆ ಹೊಡೆದಿರುತ್ತಾರೆ. ಆರೋಪಿ 2, 4 ಮತ್ತು 5 ರವರು ಹಿಡಿದು ಎಳೆದಾಡಿ ಹೀನಾಮಾನವಾಗಿ ಬೈದಿರುತ್ತಾರೆ.

ತಲೆ ಮೇಲೆ ಹೊಡೆದಿದ್ದರಿಂದ ರಕ್ತ ಬಂದು ಬಟ್ಟೆ ಮೇಲೆಲ್ಲ ರಕ್ತ ಬಿದ್ದಿತ್ತಾ ಎಂದರೆ ನನಗೆ ಗೊತ್ತಾಗಲಿಲ್ಲ. ನಾನು ಸ್ಥಳದಿಂದ ನೇರವಾಗಿ ಆಸ್ಪತ್ರೆಗೆ

ಕರೆದುಕೊಂಡು ಬಂದು ಸೇರಿಸಿರುತ್ತಾರೆ. ಆಟೋದಲ್ಲಿ  ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಒಂದೇ ದಿನ  ಮಾತ್ರ  ಚಿಕಿತ್ಸೆ ಪಡೆದುಕೊಂಡಿದ್ದೇನೆ.  ಆಸ್ಪತ್ರೆಗೆ ಪೊಲೀಸರು ಬಂದಿದ್ದರು  ನನ್ನ ಮಗನ ಮೂಲಕ ಹೇಳಿಕೆ ಬರಸಿದ್ದೇನೆ ಎನ್ನುತ್ತಾರೆ.  ಪೊಲಿಸೇರು ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ.

ನನಗೆ ವಿದ್ಯಾಭ್ಯಾಸ ಇರುವುದಿಲ್ಲ ಸಹಿ ಮಾಡಲು ಮಾತ್ರ ಬರುತ್ತದೆ. ನನ್ನ ಮಗನು ಬಳಿ ಬರೇಸಿದ್ದನ್ನು ಓದಲು ಬರುವುದಿಲ್ಲ ಆದ್ದರಿಂದ ಏನೂ ಬೆರದಿದೆ ಎಂದು ಹೇಳಲು ಬರುವುದಿಲ್ಲ.  ಆ ಸಮಯಕ್ಕೆ ಬೇರೆ ಯಾರೂ ಜನ ಸೇರಿರಲಿಲ್ಲ. ನನ್ನ ಸೊಸೆ ಬಂದಿದ್ದರು.  ಪೊಲೀಸರು ಮಹಜರು ಮಾಡಲು ಬಂದಾಗ ನಾನು ಇದ್ದೆ. ಪೊಲೀಸರಿಗೆ ಸದರಿ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಗಲಾಟೆಯಾದ 2-3 ದಿನ ನಂತರ ಪೊಲೀಸರು ಬಂದಿದ್ದರು. ಮಹಜರಿನಲ್ಲಿ ನಾನು ಹೇಳಿ ಬರೆಸಿಲ್ಲ ಎ ದರೆ ಸರಿಯಲ್ಲ. ಸದರಿ ಮಹಜರುನಲ್ಲಿ ಏನೂ ಬರೆದಿದೆ ಎಂದು ಗೊತ್ತಿದೆ  ಎಂದರೆ ಸಾಕ್ಷಿನನಗೆ ಒದಲು ಬರುವುದಿಲ್ಲ  ಎಂದು ಹೇಳುತ್ತಾರೆ. ಜಾಗದಲ್ಲಿ ಪೊಟೋ ತೆಗೆದಿದ್ದಾರೆ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಮಹಜರಿಗೆ ಇರಲಿಲ್ಲ ಎಂದರೆ ಸರಿಯಲ್ಲ ಯಾವುದೇ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

ದಿನಾಂಕ 27-5-2020 ರಂದು  ನಾನು  ನನ್ನ ಮಗ ಮತ್ತು ಸೊಸೆ ಸೇರಿ ಆರೋಪಿತರಿಗೆ ಹಲ್ಲೆ ಮಾಡಿದ ಸಂಬಂದ ಪ್ರಕರಣದಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದ 5-6 ತಿಂಗಳ ನಂತರ ನಮ್ಮ ಮತ್ತು ಆರೋಪಿ ನಡುವೆ ಯಾವುದೇ ಹೊಡೆದಾಟ ಆಗಿಲ್ಲ ಆ ಬಗ್ಗೆ ನನಗೆ ಗೊತ್ತಿಲ್ಲ.  ದಿಂನಾಂಕ 30-8-2020 ರಂದು ನಾನು ನನ್ನ ಮಗ ಸೊಸೆ, ಇನ್ನೊಬ್ಬ ಮಗ ಹಾಲಪ್ಪ ಎಲ್ಲರೂ ಸೇರಿ ಸ.ನಂ 84/3 ರಲಿಪಿಲ ಹೋಗಿ ಬಲತ್ಕಾರವಾಗಿ ಶೆಡ್  ನಿರ್ಮಾಣ ಮಾಡಿದ್ದೇವೆ  ಎಂದರೆ ಸರಿಯಲ್ಲ.  ನಾನು ಮತ್ತು ನನ್ನ ಮಗ ಸೇರಿ 1 ಮತ್ತು  2 ನೇ ಆರೋಪಿಗಳಿಗೆ ಕೈ  ಕಾಲು ಗಳಿಗೆ ಹೊಡೆದು ಗಾಯ ಮಾಡಿದ್ದೇವೆ ಎಂದರೆ ಸರಿಯಲ್ಲ.  ಒಂದನೇ ಆರೋಪಿ ಬೆರಳನ್ನು ಕತ್ತರಿಸಿದ್ದೇವೆ ಎಂದರೆ ಸರಿಯಲ್ಲ.

ಆ ಪ್ರಕರಣ ಸಂಬಂಧ ನಾನು ನ್ಯಾಯಾಂಗ ಬಂಧನ ದಲ್ಲಿ ಇದ್ದೇನೆ ಎಂರದೆ ಸರಿ ಸಾಕ್ಷಿ ಮುಂದುವರಿದು ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ ಎನ್ನುತ್ತಾರೆ. ನನ್ನ ಮಗ ಉಮೇಶ ಇವರ ಕೈಯ 4 ಬೆರಳನ್ನು ಕಡಿದಿದ್ದಾರೆ ಎಂದರೆ ಸರಿಯಲ್ಲ. . ಸದರಿ ಪ್ರಕರಣವು ಮಾನ್ಯ ಸಾಗರ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಮೇಲೆ ಹೇಳಿದ ಪ್ರಕರಣದಿಂದ ತಪ್ಪಿಸಿಕೊಳಳಲು ಸುಳ್ಳು ದೂರ ನೀಡಿದ್ದೇವೆ ಎಂದರೆ ಸರಿಯಲ್ಲ. ಎಲ್ಲಾ ವಾಸ್ತಾವರಾಶ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸನಂ 83/4 ರಲ್ಲಿ ನಮಗೆ ಯಾವುದೇ ಹಕ್ಕು ಸ್ವಾಧೀನಾನುಭವ ಇಲ್ಲ ಎಂದರೆ ಸರಿಯಲ್ಲ. ನನಗೆ ತಲೆಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗೆ ದಾಖಲಾಗಿಲ್ಲ ಎಂದರೆ ಸರಿಯಲ್ಲ. ನಾನು ಮದ್ಯಪಾನ ಮಾಡಿಕೊಂಡು ಬಿದ್ದು ಪೆಟ್ಟು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಅವಾಚವಾಗಿ ಬೈದಿಲ್ಲ ಎಂದರೆ ಸರಿಯಲ್ಲ. ಜೀವದ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರೂ ನನ್ನ ಮಗ ಮತ್ತು ಸೊಸೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ.

ನನಗೆ ಎರಡು ದೊಣ್ಣೆಗಳಿಂದ ಹೊಡೆದಿದ್ದಾರೆ. ಉಮೇಶ ಮತ್ತು ದಿನೇಶ ಇಬ್ಬರು ಒಂದೊಂದು ದೊಣ್ಣೆಯಿಂದ ನನಗೆ ಹಲೆಪ್ಲಿ ಮಾಡಿರುತ್ತಾರೆ, ನ್ಯಾಯಾಲಯದ ಮುಂದೆ ಇರುವ ಎಂ.ಓ ಗಳು ದೊಣ್ಣೆ ಅಲ್ಲ ಎಂದರೆ ಸರಿಯಲ್ಲ. ಎಂ.ಓ 1, 2 ಗುರುತಿಸಲು ವಿಶೇಷ ಗುರುತು ಇಟ್ಟು ಕೊಂಡಿದ್ದಾರೆ ಎಂದರೆ ಸಾಕ್ಷಿಯು ಅಕೇಶಿಯಾ ಮರದ್ದು ಎನ್ನುತ್ತಾರೆ. ಎಂಒ- 1 ನೀಲಗಿರಿ ಎಂದರೆ ನನಗೆ ಮರದ ಜಾತಿ ಗೊತ್ತಿಲ್ಲ ಎನ್ನುತ್ತಾರೆ. ಎಂಒ-1 ಕ್ಕೂ ,ಪ್ರಕರಣಕ್ಕೂ, ಆರೋಪಿಗೂ ಸಂಬಂಧ ಎಂದರೆ ಸರಿಯಲ್ಲ.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.</u>

ಮರು ವಿಚಾರಣೆ ಇಲ್ಲ. **ಓ.ಕೇ. ಸ. ಇ .ಎ . ಒ**

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಹೊಸನಗರ